# ಬಟ್ಟೆ ಖರೀದಿಯ ಬಗೆ ಬಗೆ ಮಜಲು



**ಕಾಲ ಸರಿಯುತ್ತಾ ನಮ್ಮ ಶಾಪಿಂಗ್ ಮಾದರಿ ಬದಲಾಗಿದೆ. ಇದಾಗ್ಯೂ ನಮ್ಮ ದೇಹ–ಮನಸ್ಸಿಗೊಪ್ಪುವ ಬಟ್ಟೆ ಅನಾಯಾಸವಾಗಿ ದೊರೆಯುವುದು ವಿರಳ.**

■ ಕಾರ್ತಿಕ್ ಕೃಷ್ಣ

ಲೋಕದಲ್ಲಿರುವ ಅಷ್ಟೂ ಶಾಪಿಂಗುಗಳಲ್ಲಿ ಬಟ್ಟೆ ಶಾಪಿಂಗು ಅತಿ ಕ್ಲಿಷ್ಟಕರ. ಸರಿಯಾದ ಡಿಸೈನ್ ಇರುವ ಆಭರಣವಾದರೂ ಬೇಗ ದೊರಕೀತು, ಆದರೆ ಈ ಬಟ್ಟೆ ಉಂಟಲ್ಲ... ಕಾಡಿಸದೆ, ಪೀಡಿಸದೆ ಅನಾಯಾಸವಾಗಿ ಸಿಗುವುದು ಅತಿ ವಿರಳ. ಸರಿಯಾದ ಬಣ್ಣ, ಫಿಟ್ಟಿಂಗು ಅಂತ ಕೈಗೆ ಸಿಕ್ಕಿದ ಬಟ್ಟೆಗಳನ್ನೆಲ್ಲಾ ಪರಿಶೀಲಿಸುತ್ತಾ, ಒಂದು ಅಂಗಡಿಯಿಂದ ಇನ್ನೊಂದು ಅಂಗಡಿಗೆ ಅಲೆಯುತ್ತಾ, ಸಾಕಪ್ಪಾ ಸಾಕು ಎಂದುಕೊಳ್ಳುವಷ್ಟರಲ್ಲಿ ನಮಗೊಪ್ಪುವ ಬಟ್ಟೆಯೊಂದು ಅದ್ಯಾವುದೋ ಅಂಗಡಿಯ ರ್‍ಯಾಕ್‌ನಲ್ಲೋ ಅಥವಾ ಹ್ಯಾಂಗರಿನಲ್ಲೋ ಧುತ್ತೆಂದು ಪ್ರತ್ಯಕ್ಷವಾಗುವ ಗಳಿಗೆಯುಂಟಲ್ಲ, ಬಹುಶಃ ದೇವರೇ ಎದುರಿಗೆ ಬಂದರೂ, ಅಷ್ಟೊಂದು ಧನ್ಯತಾಭಾವ ದೊರೆಯದೇನೋ.

ಯಾವ ಯೋಚನೆಯೂ ಇಲ್ಲದೆ ನಮ್ಮ ಪಾಡಿಗೆ ಓದುತ್ತಾ, ಆಟವಾಡುತ್ತಾ ದಿನಗಳುರುಳುತ್ತಿದ್ದ ಕಾಲವಿತ್ತು. ವರ್ಷಕ್ಕೆರಡು ಬಾರಿ ಅಪ್ಪ ಅಮ್ಮನೊಡನೆ ಬಸ್ಸು ಹತ್ತಿ ಹತ್ತಿರದ ದೊಡ್ಡ ಜವಳಿ ಅಂಗಡಿಗೆ ದಾಂಗುಡಿಯಿಟ್ಟು, ಬಟ್ಟೆ ಕೊಂಡುತಂದು ಬೀಗುತ್ತಿದ್ದ ನಮಗೆ ಅದೊಂದು ದೊಡ್ಡ ಕೆಲಸವೆಂದು ಅನಿಸುತ್ತಲೇ ಇರಲಿಲ್ಲ. ಅಪ್ಪನೋ ಅಮ್ಮನೋ ಅವರಿಗಿಷ್ಟದ ಬಟ್ಟೆ ಎತ್ತಿಕೊಂಡು, ನಮ್ಮ ಷರಟನ್ನು, ಕೆಲವೊಮ್ಮೆ ಶರಾಯಿಯನ್ನೂ ಅಲ್ಲಿಯೇ ಬಿಚ್ಚಿಸಿ ಟ್ರಯಲ್ ನೋಡುತ್ತಿದ್ದರು. ಆಗ ಟ್ರಯಲ್ ರೂಮುಗಳೇ ಇರುತ್ತಿರಲಿಲ್ಲ. ಆಗಿನ ಕಾಲದಲ್ಲಿ ನಮ್ಮದೇನಿದ್ದರೂ ಅಲ್ಲೇ ಡ್ರಾ, ಅಲ್ಲೇ ಬಹುಮಾನ ಎಂಬಂತೆ ಅಲ್ಲೇ ಟ್ರೈ, ಅಲ್ಲೇ ಪ್ಯಾಕ್!

ಕಾಲ ಸರಿಯುತ್ತಾ ನಮ್ಮ ಶಾಪಿಂಗ್ ಮಾದರಿ ಬದಲಾಯಿತು. ಬದಲಾವಣೆಯೇ ಜಗದ ನಿಯಮ ಅಲ್ಲವೇ? ಮದುವೆಗೆ ಮುನ್ನ ಒಂಟಿ ಸಿಂಹನಾಗಿದ್ದಾಗ ನನ್ನೆಲ್ಲ ಬಟ್ಟೆ ಖರೀದಿ ಆನ್ಲೈನ್‌ನಲ್ಲೇ. ಅತಿ ಹೆಚ್ಚು ಡಿಸ್ಕೌಂಟ್ ಇರುವ ಬಟ್ಟೆಗಳೆಲ್ಲ ನನ್ನ ಶಾಪಿಂಗ್ ಕಾರ್ಟ್‌ಗೆ ಸೇರಿ ಬಜೆಟ್ ಆಧಾರದ ಮೇಲೆ ಒಂದೊಂದಾಗಿ ನನ್ನ ತೆಕ್ಕೆಗೆ ಬೀಳುತ್ತಿದ್ದವು. ಖರೀದಿಗೂ ಮೊದಲು ಟ್ರಯಲ್ ನೋಡುವ ವ್ಯವಸ್ಥೆ ಅಲ್ಲಿಲ್ಲವಾದ್ದರಿಂದ ಬಟ್ಟೆ ಅಸಲಿಯತ್ತು ತಿಳಿಯುತ್ತಿದ್ದದ್ದು ಮನೆಗೆ ಬಂದ ಕೊರಿಯರ್ ತೆರೆದ ಮೇಲೇ! ಇದೊಂಥರ ಲಕ್ಕಿಡಿಪ್ಪಿನ ಹಾಗೆ. ಸರಿಯಾಗಿ ಫಿಟ್ ಆದರೆ ಆಯಿತು, ಇಲ್ಲವಾದರೆ ಅದನ್ನು ಮರಳಿಸುವ ಸೌಲಭ್ಯವಂತೂ ಇದ್ದೇ ಇದೆ.

ಬಟ್ಟೆ ಶಾಪಿಂಗಿನ ಕರಾಳ ಅಧ್ಯಾಯ ಶುರುವಾದದ್ದು ನನ್ನ ಮದುವೆಯಾದ ಮೇಲೆ. ಮಡದಿಯ ಬಟ್ಟೆಗಳಿಗೆ ಒಪ್ಪುವ ಬಣ್ಣದ ಶರಟು, ಪ್ರತಿ ಕಾರ್ಯಕ್ರಮಕ್ಕೂ ಒಂದೊಂದು ಹೊಸ ಬಟ್ಟೆ– ಹೀಗೆ ವೈವಾಹಿಕ ಜೀವನದ ಬಹುಪಾಲು ಬಟ್ಟೆಗಳ ಖರೀದಿಯಲ್ಲೇ ಕಳೆದುಹೋಗಿದೆ. ಮೊದಲಾದರೆ ಇದ್ದ ಕೆಲ ಬಟ್ಟೆಗಳಲ್ಲೇ ಸಂಯೋಜನೆ ಮಾಡಿ ಹೇಗೋ ಆರಾಮಾಗಿದ್ದೆ. ಆದರೀಗ ಬಟ್ಟೆಯ ಬಣ್ಣಕ್ಕೆ ನನ್ನ ರಾಶಿಯೂ ಕುಣಿಕೆ ಹಾಕಿಕೊಂಡು ನನ್ನ ಬದುಕು 'ವರ್ಣಮಯ'ವಾಗುವ ಬದಲು 90ರ ದಶಕದ ಸಿನಿಮಾದಂತಾಗಿದೆ.

ಇತ್ತೀಚೆಗೆ ಏನಾಯ್ತು ಗೊತ್ತೇ, ಮಡದಿಯೊಡನೆ ಬಟ್ಟೆ ಖರೀದಿಗೆ ಹೋಗಿದ್ದೆ. ಅವಳಿಗಲ್ಲ, ನನಗೆ. ಬೇಗ ಮುಗಿಸಬಹುದು ಅಂದುಕೊಂಡರೆ ಆಗಿದ್ದೇ ಬೇರೆ. ಅಂಗಡಿ ಅಂಗಡಿ ಸುತ್ತಿ ಕೊನೆಗೂ ಒಂದು ಮಳಿಗೆಯಲ್ಲಿ ನನ್ನಿಷ್ಟದ ಬಟ್ಟೆ ಸಿಕ್ಕಿತು. ಬಿಳಿ ಗೆರೆಗಳಿರುವ ಕಪ್ಪು ಬಣ್ಣದ ಶರಟು. ಟ್ರಯಲ್ ರೂಮಿನಲ್ಲಿ ಅದನ್ನು ತೊಟ್ಟು ಪೋಸು ಕೊಟ್ಟದ್ದೇ ಕೊಟ್ಟದ್ದು. ನನಗೊಪ್ಪುವ ಬಟ್ಟೆ ಸಿಕ್ಕ ಖುಷಿಯಲ್ಲಿ ಇನ್ನೇನು ಬಿಲ್ ಮಾಡಿಸಬೇಕು ಅನ್ನುವಷ್ಟರಲ್ಲಿ ಮಡದಿಗೆ ಏನನ್ನಿಸಿತೋ ಏನೋ, ಮೊಬೈಲ್ ಕೈಗೆತ್ತಿಕೊಂಡು ಅದೇನೋ ಹುಡುಕತೊಡಗಿದಳು. ಅವಳು ಇಂಥ ಸಮಯದಲ್ಲಿ ಫೋನು ಕೈಗೆತ್ತಿಕೊಂಡರೆ ಏನೋ ಎಡವಟ್ಟಾಗಿದೆ ಎಂದೇ ಅರ್ಥ. ನಾನು ಅವಳನ್ನೇ ನೋಡುತ್ತಾ ಕಾಯುತ್ತಿದ್ದೆ. ಕೆಲ ಸೆಕೆಂಡುಗಳ ನಂತರ ಮುಖದಲ್ಲೊಂದು ವಿಷಣ್ಣ ಭಾವ ತುಂಬಿಕೊಂಡು 'ಬೇಡ ಕಣ್ರೀ ಇದು, ನಿಮ್ಮ ರಾಶಿಗೆ ಕಪ್ಪು ಬಣ್ಣ ಆಗಿಬರುವುದಿಲ್ಲ' ಎಂದು ಉಸುರಿದಾಗ ಕಪ್ಪು ಶರಟಿನ ಬಗ್ಗೆ ಕಂಡಿದ್ದ ಬಣ್ಣಬಣ್ಣದ ಕನಸುಗಳೆಲ್ಲಾ ಕರಗಿಹೋಗಿತ್ತು. ಇಂತಹ ಹಲವು ಸಂಗತಿಗಳನ್ನು ಪರಿಗಣಿಸಿಯೇ ನಾನು ಬಟ್ಟೆಯ ಖರೀದಿಯನ್ನು ಅತಿ ಕಷ್ಟದ ಕೆಲಸ ಎಂದದ್ದು.

ಬಟ್ಟೆಯ ಹುಡುಕಾಟದಲ್ಲಿ ನಿತ್ರಾಣಗೊಂಡ ಒಬ್ಬರು ತಲೆತಿರುಗಿ ಬಿದ್ದ ಸುದ್ದಿಯೂ ಈಚೆಗೆ ನನ್ನ ಕಿವಿಗೆ ಬಿದ್ದಿತ್ತು. ಇಡೀ ದಿನ ಏನೂ ತಿನ್ನದೇ ಸಣ್ಣ ಪುಟ್ಟ ಅಂಗಡಿಯಿಂದ ಹಿಡಿದು ಐಷಾರಾಮಿ ಜವಳಿ ಅಂಗಡಿಯನ್ನು ಶೋಧಿಸಿದರೆ ತಲೆಸುತ್ತು ಬರದೇ ಇನ್ನೇನಾದೀತು, ಹೇಳಿ?

ಇದನ್ನೆಲ್ಲಾ ನೋಡಿದರೆ, ಯಾವುದೋ ಒಂದು ಶರಟಿಗೆ, ಇದ್ದ ಎರಡು ಜೀನ್ಸ್‌ಗಳಲ್ಲಿ ಒಂದನ್ನು ಸಿಕ್ಕಿಸಿಕೊಂಡು ರಾಜಾರೋಷವಾಗಿ ಅಲೆಯುತ್ತಿದ್ದ ದಿನಗಳು ನೆನಪಿಗೆ ಬರುತ್ತವೆ. ಬಟ್ಟೆಗಳ ಆಯ್ಕೆ ವಿಷಯದಲ್ಲಿ ಸ್ವತಂತ್ರನಾಗಿದ್ದ ನನ್ನನ್ನು ನೋಡಿ ಮೆಚ್ಚಲು ಯಾರೂ ಇರಲಿಲ್ಲ, ಯಾರನ್ನು ಮೆಚ್ಚಿಸಬೇಕಾಗಿಯೂ ಇರಲಿಲ್ಲ! ಆದರೆ ಈಗ ಹಾಗಲ್ಲ, ನಾನು ತಯಾರಾಗಿ ಹೊರ ಹೋಗಬೇಕೆಂದರೆ ಮಡದಿಯ ತೀಕ್ಷ್ಣ ಕಣ್ಣಿನ ಸ್ಕ್ಯಾನರ್ ನೋಟವನ್ನು ಪಾಸಾಗಲೇಬೇಕು.

ಪ್ರತಿಕ್ರಿಯಿಸಿ: feedback@sudha.co.in